# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :: 1316
ಸದಸ್ಯರ ಹೆಸರು :: ಶ್ರೀ ಬಿ.ಜಿ.ಪಾಟೀಲ್
ಉತ್ತರಿಸುವ ದಿನಾಂಕ :: 18-03-2020
ಉತ್ತರಿಸುವ ಸಚಿವರು :: ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹಿಂದೂ ರುದ್ರಭೂಮಿಗಳನ್ನು ಅಭಿವೃದ್ಧಿಪಡಿಸಲು ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಅನುದಾನ ಎಷ್ಟು? (ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ರುದ್ರಭೂಮಿಗಳನ್ನು ಅಭಿವೃದ್ಧಿಪಡಿಸಲು ಕಳೆದ ಮೂರು ವರ್ಷಗಳಿಂದ ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಗಿನಂತಿರುತ್ತದೆ. |

| ಜಿಲ್ಲೆ | ವರ್ಷ | ಬಿಡುಗಡೆ ಮಾಡಲಾದ ಅನುದಾನ |
|---|---|---|
| ಕಲಬುರಗಿ | 2017-18ನೇ ಸಾಲಿಗೆ<br>2018-19ನೇ ಸಾಲಿಗೆ<br>2019-20ನೇ ಸಾಲಿಗೆ | ರೂ. 5,98,000/-<br>ರೂ. 15,00,000/-<br>ರೂ. 5,00,000/- |
| ಯಾದಗಿರಿ | 2017-18 ಸಾಲಿಗೆ<br>2018-19ನೇ ಸಾಲಿಗೆ<br>2019-20ನೇ ಸಾಲಿಗೆ | ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.<br>ರೂ.15,00,000/-<br>ರೂ.5,00,000/- |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಬಿಡುಗಡೆಯಾದ ಅನುದಾನದಲ್ಲಿ ಯಾವ ಯಾವ ರುದ್ರಭೂಮಿಗಳಿಗೆ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ; | **ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ವಿವರ ಈ ಕೆಳಕಂಡಂತಿದೆ:**<br>1. 2017-18ನೇ ಸಾಲಿನಲ್ಲಿ ಯಾವುದೇ ಅನುದಾನ ಇರುವುದಿಲ್ಲ.<br>2. 2018-19ನೇ ಸಾಲಿಗೆ ಕಲಬುರಗಿ ತಾಲ್ಲೂಕಿನ ಫರಹತಬಾದ್ ಗ್ರಾಮದ ರುದ್ರಭೂಮಿ ಅನುದಾನಕ್ಕಾಗಿ ರೂ.5,00 ಲಕ್ಷ ಹಾಗೂ ಆಳಂದ ತಾಲ್ಲೂಕಿನ ಮಡಿಯಾಳ ಗ್ರಾಮದ ರುದ್ರಭೂಮಿ ಅಭಿವೃದ್ಧಿಗಾಗಿ ರೂ.5.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.<br>3. 2019-20ನೇ ಸಾಲಿನಲ್ಲಿ ಯಾವುದೇ ಅನುದಾನ ಇರುವುದಿಲ್ಲ.<br><br>**ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ ಅನುದಾನ ಬಿಡುಗಡೆಯಾದ ವಿವರ ಈ ಕೆಳಕಂಡಂತಿದೆ:**<br>1. 2017-18ನೇ ಸಾಲಿನಲ್ಲಿ ಯಾವುದೇ ಅನುದಾನ ಇರುವುದಿಲ್ಲ.<br>2. 2018-19ನೇ ಸಾಲಿನ ಅನುದಾನದ ಕುರಿತು<br>1. ಶಹಾಪೂರ ತಾಲ್ಲೂಕಿನ ಶಹಾಪೂರ ನಗರದ ರುದ್ರಭೂಮಿಯಲ್ಲಿ ಚಿತಗಾರ ನಿರ್ಮಿಸಲು ಅನುಷ್ಠಾನಾಧಿಕಾರಿಗಳಾದ KRIDL-EE ಯಾದಗಿರಿ ಇವರು ತಯಾರಿಸಿದ ಅಂದಾಜು ಪತ್ರಿಕೆಗೆ ರೂ.5.00 ಲಕ್ಷ ಅನುದಾನದಲ್ಲಿ 1ನೇ ಕಂತು 70% ಅನುದಾನ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯ ಹಂತದಲ್ಲಿದೆ. |

| | | |
|---|---|---|
| | | 2. ಶಹಪೂರ ನಗರದ ಗಣೇಶ ನಗರದ ಹತ್ತಿರವಿರುವ ಹಿಂದೂ ರುದ್ರಭೂಮಿ ಅಭಿವೃದ್ದಿಗಾಗಿ ಸ.ನಂ.76ರ ವಿಸ್ತೀರ್ಣ 5–37 ಎಕರೆ /ಗುಂಟೆ ಜಮೀನಿನಲ್ಲಿ ರೂ.1.50 ಲಕ್ಷ ಅನುದಾನ ಅನುಷ್ಠಾನಾಧಿಕಾರಿಗಳಾದ- EE-PRED ಯಾದಗಿರಿ ಇವರಿಗೆ ಬಿಡುಗಡೆ ಮಾಡಲಾಗಿದೆ.<br>3. ಶಹಪೂರ ನಗರದ ಜೈನ ಶಾಲೆಯ ಹತ್ತಿರವಿರುವ ಹಿಂದೂ ರುದ್ರಭೂಮಿ ಅಭಿವೃದ್ಧಿಗೆ ರೂ.2.00/– ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.<br>4. ವಡಗೇರಾ ತಾಲ್ಲೂಕಿನ ಕೊಡಾಳ ಗ್ರಾಮದ ರುದ್ರಭೂಮಿಗೆ ಸ.ನಂ. 183ಎ ರಲ್ಲಿ 1–19 ಎಕರೆ/ ಗುಂಟೆ ಜಮೀನಿಗೆ ರೂ.1–00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.<br>5. ವಡಗೇರಾ ತಾಲ್ಲೂಕಿನ ಹೈಹ್ಯಾಳ(ಬಿ) ಗ್ರಾಮದ ಅನಕ ಸೂಗೂರು ಗ್ರಾಮದ ರುದ್ರ ಭೂಮಿ ಸ.ನಂ. 50 ವಿಸ್ತೀರ್ಣ 2.00 ಎಕರೆ /ಗುಂಟೆ ಜಮೀನಿಗೆ ರೂ.1.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.<br><br>1. 2019–20ನೇ ಸಾಲಿಗೆ ಶಹಪೂರ ತಾಲ್ಲೂಕಿನ ಹೋತಪೇಠ ಗ್ರಾಮದ ಹಿಂದೂ ರುದ್ರಭೂಮಿಗಾಗಿ ಜಂಗಲ್ ಕಟ್ಟಿಂಗ್ & ತಂತಿಬೇಲೆ ಕಾಮಗಾರಿಗಾಗಿ ರೂ.1.00 ಲಕ್ಷ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ಕೈಗೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಹಾಗೂ ಬಾಕಿ ಇರುವ ಅನುದಾನದ ಕುರಿತು ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಧಿಕಾರಿ ರವರಿಂದ ತಹಶೀಲ್ದಾರರಿಗೆ ಪತ್ರ ಬರೆಯಲಾಗಿದೆ. |
| ಇ) | ಹಿಂದೂ ರುದ್ರಭೂಮಿಗಾಗಿ ಭೂಮಿ ನೀಡುವಂತೆ ಮೇಲ್ಕಂಡ ಜಿಲ್ಲೆಗಳಲ್ಲಿ ಎಷ್ಟು ಅರ್ಜಿಗಳು ಇದೂವರೆವಿಗೂ ಸಲ್ಲಿಕೆಯಾಗಿದೆ; ಇವುಗಳಲ್ಲಿ ಎಷ್ಟು ರುದ್ರಭೂಮಿಗಾಗಿ ಭೂಮಿಗಳನ್ನು ನೀಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಾರ್ವಜನಿಕ ರುದ್ರಭೂಮಿಗಾಗಿ ಅರ್ಜಿ ಬಂದಿರುತ್ತವೆಯೇ ವಿನಹಃ ಹಿಂದು ರುದ್ರಭೂಮಿಗಾಗಿ ಭೂಮಿ ನೀಡುವಂತೆ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: ಆರ್‌ಡಿ 32 ಎಲ್‌ಜಿಜಿ 2020**

(ಆರ್.ಅಶೋಕ್)
**ಕಂದಾಯ ಸಚಿವರು**